ಅಧ್ಯಕ್ಷರು:– ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸಲಾಯಿತು

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಕೆ.ಜಿ.ಐ.ಡಿ.ಯಲ್ಲಿ ಕೋಟ್ಯಾಂತರ ರೂಪಾಯಿ ದುರುಪಯೋಗವಾಗಿದೆ ಎಂಬ ಪತ್ರಿಕಾ ವರದಿಯ ಬಗ್ಗೆ

† ಶ್ರೀ ಪಿ.ಜಿ.ಆರ್. ಸಿಂಧ್ಯ:– ನನ್ನ ವಿಚಾರವನ್ನು ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕೆಂದು ಹೇಳಿ ನಾನು ಇಲ್ಲಿ ಎದ್ದು ನಿಂತಿದ್ದೇನೆ. ನಿನ್ನೆಯ ದಿನ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ನಮ್ಮ ಕೆ.ಜಿ.ಐ.ಡಿ.ನಲ್ಲಿ ಕೋಟ್ಯಾಂತರ ರೂಪಾಯಿ ಹಣದ ದುರುಪಯೋಗ ಆಗಿದೆ ಎಂದು ವರದಿಯಾಗಿದೆ. ಸ್ಟೇಟ್ ಅಕೌಂಟ್ಸ್‌ನವರು ಕೊಟ್ಟಿರತಕ್ಕಂಥ ವರದಿ ಪ್ರಕಾರವಾಗಿ ಸರ್ಕಾರಿ ಅಧಿಕಾರಿಗಳು, ಉದ್ಯೋಗಿಗಳು ಸಂದಾಯ ಮಾಡಿರತಕ್ಕ ವಂತಿಗೆ ಹಣದಲ್ಲಿ ದುರುಪಯೋಗವಾಗಿದೆ. ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗದುಕೊಂಡಿಲ್ಲ ಎಂಬುದು ಒಂದು ವಿಚಾರವಾದರೆ ಮತ್ತೊಂದು ವಿಚಾರ ಏನೆಂದರೆ ಅವರು ದಾಖಲೆಗಳನ್ನು ತಿದ್ದಿದ್ದಾರೆ. ಮತ್ತು ಕೆಲವೊಂದು ದಾಖಲೆಗಳನ್ನು ನಾಪತ್ತೆ ಮಾಡಿರುವುದು ವರದಿಯಾಗಿದೆ. ಇದು ಇಷ್ಟೇ ಅಲ್ಲ; ಮನಿಆರ್ಡರ್ ಹಣವನ್ನು ಬ್ಯಾಂಕಿಗೆ ಜಮಾ ಮಾಡದೇ ಇರತಕ್ಕದ್ದು, ರಸೀದಿ ಹಾಕದೇ ಇರತಕ್ಕದ್ದೂ ಸಹ ವರದಿಯಾಗಿದೆ. ಈಗ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಂದ ಕೆಲವು ಲಕ್ಷ ರೂಪಾಯಿಗಳನ್ನು ವಾಪಸ್ಸು ಪಡೆದುಕೊಳ್ಳಬೇಕು. ಇದನ್ನು ಅವರಿಂದ ವಸೂಲಿ ಮಾಡಬೇಕು ಎಂಬುದು ಅದಕ್ಕೆ ಅಗತ್ಯ ಇದೆ ಎನ್ನತಕ್ಕ ಮಾತನ್ನು ವರದಿಯಲ್ಲಿ ತಿಳಿಸಲಾಗಿದೆ. ಲೆಕ್ಕಪರಿಶೋಧಕ ತಂಡದವರು ಕೆ.ಜಿ.ಐ.ಡಿ.ಗೆ ಹೋದ ಸಂದರ್ಭದಲ್ಲಿ ಅಲ್ಲಿ ಇರತಕ್ಕ ಅಧಿಕಾರಿ ವರ್ಗದವರು ಸಹಕಾರವನ್ನು ಸಹಿತ ಕೊಡಲಿಲ್ಲ, ದಾಖಲೆಗಳನ್ನು ಅವರಿಗೆ ಒಪ್ಪಿಸಲಿಲ್ಲ ಎಂಬುದು ವರದಿಯಾಗಿರುತ್ತದೆ. ಇದರಿಂದ ಯಾವ ನೌಕರರು ವಿಮಾನಿಧಿ ಹಣವನ್ನು ತೆಗೆದುಕೊಳ್ಳಬೇಕು ಎಂದು ಇದ್ದಾರೆ ಅವರಿಗೆ ಅದು ಸಿಗುತ್ತಾ ಇಲ್ಲ ಎಂದು ವರದಿಯಾಗಿದೆ. ಇದರಲ್ಲಿ ಮುಖ್ಯವಾಗಿ ಇರತಕ್ಕದ್ದು ಏನೆಂಬುದನ್ನು ಹೇಳುತ್ತೇನೆ.

ಇಂತಹ ಸಂಸ್ಥೆಗಳಿಗೆ ನಾವು ಐ.ಎ.ಎಸ್. ಅಧಿಕಾರಿಗಳನ್ನು, ಹೆಚ್ಚು ಮೇಲ್ಪಟ್ಟಜ್ಞ ಅಧಿಕಾರಿಗಳನ್ನು ನೇಮಕ ಮಾಡುತ್ತೇವೆ. ಇಂತಹ ವಿಚಾರಗಳು ಅವರ ಗಮನಕ್ಕೆ ಬರಲಿಲ್ಲ ಎಂದರೆ ಹೇಗೆ ? public memory is very short. ಅವರು ಇರುವ ಟೈಮಿನಲ್ಲಿ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ನಂತರ ಅವರು ಹೊರಟುಹೋಗುತ್ತಾರೆ. ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ ನಾನು ಸಾರಿಗೆ ಇಲಾಖೆಯ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಕೆ.ಎಸ್.ಆರ್.ಟಿ.ಸಿ. ಬೋರ್ಡಿಗೆ ಅಥವಾ ಟ್ರಾನ್ಸ್‌ಪೋರ್ಟ್ ಮಿನಿಸ್ಟರ ಗಮನಕ್ಕೆ ತರದಂತೆ ಅಲ್ಲಿರತಕ್ಕ ಎಂ.ಡಿ.ಯವರು ಸುಮಾರು 33 ಕೋಟಿ ರೂಪಾಯಿ ಜಾಸ್ತಿಯನ್ನು ಬೋರ್ಡ್ ಗಮನಕ್ಕೆ ತರದೇ ಪರ್ಚೇಸ್ ಮಾಡಿದ್ದರು. ನನ್ನ ಗಮನಕ್ಕೆ ತರತಕ್ಕ ಅಗತ್ಯವೇನೂ ಇರಲಿಲ್ಲ. ನಾನು ತತ್‌ಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಆವೊತ್ತಿನ ಮುಖ್ಯಮಂತ್ರಿಗಳಿಗೆ ತಿಳಿಸಿದ ಮೇಲೆ ಮುಖ್ಯಮಂತ್ರಿಗಳೂ ಸಹಿತ ಕ್ರಮ ತೆಗೆದುಕೊಳ್ಳಬೇಕೆಂದು ಮುಖ್ಯಕಾರ್ಯದರ್ಶಿಯವರಿಗೆ ಕಾಗದ ಬರೆದರು. ಮುಖ್ಯಕಾರ್ಯದರ್ಶಿಯವರು ಏನು ಮಾಡಿದರು ಎಂದರೆ ಎರಡು ವರ್ಷ ಫೈಲನ್ನು ಹಾಗೆಯೇ ಇಟ್ಟರು. ಈಗ ಅದೇ ಅಧಿಕಾರಿ ಆವೊತ್ತು ಬೇರೆ ಒಳ್ಳೆಯ ಕೆಲಸದಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾನೆ. ಒಬ್ಬ ವಿಲೇಜ್ ಅಕೌಂಟೆಂಟ್, ಅಥವಾ ಒಬ್ಬ ಲೈನ್‌ಮ್ಯಾನ್, ಅಥವಾ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಅಥವಾ ಒಬ್ಬ ಜ್ಯೂನಿಯರ್ ಇಂಜಿನಿಯರ್ ಮೇಲೆ ಕ್ರಮ ತೆಗೆದುಕೊಳ್ಳುತ್ತಿರುವಾಗ ಈ ರೀತಿ ಅಧಿಕಾರ ದುರುಪಯೋಗ ಮಾಡಿರತಕ್ಕ ಇಲಾಖಾ ಮುಖ್ಯಸ್ಥರ ಮೇಲೆ ನಾವೆಲ್ಲರೂ ಸಹಿತ ಜಾತಿ ಹೆಸರಿನಲ್ಲಿ ಅಥವಾ ಇನ್ನೊಂದು ಲಾಬಿ ಸಪೋರ್ಟ್ ಮಾಡುತ್ತಾರೆ ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಕ್ರಮ ತೆಗೆದುಕೊಳ್ಳುತ್ತಿಲ್ಲ.

ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್‌ಗಳ ಬಗ್ಗೆ ತಮಗೆ ಗೊತ್ತಿದೆ. ನಮ್ಮಲ್ಲಿ ಇರತಕ್ಕ ಪಬ್ಲಿಕ್ ಅಂಡರ್‌ಟೇಕಿಂಗ್‌ಗಳಲ್ಲಿ ಅಕೌಂಟಬಿಲಿಟಿ ಇಲ್ಲ. ಅವರ್ಯಾರಿಗೂ ಅಕೌಂಟಬಿಲಿಟಿ ಇಲ್ಲದೇ ಇರುವುದರಿಂದ ಈ ದುಃಸ್ಥಿತಿಗೆ ಇವೊತ್ತು ಬಂದಿದೆ. ನಾನು ಮುಖ್ಯಮಂತ್ರಿಗಳಲ್ಲಿ ಈ ವಿಚಾರದಲ್ಲಿ ಏನು ಒತ್ತಾಯ ಮಾಡುತ್ತೇನೆಂದರೆ ಇದು ಒಂದೇ ಅಲ್ಲ ಬೇರೆ ಇಲಾಖೆಗಳ ಬಗ್ಗೆಯೂ ಸಹ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಕೆ.ಜಿ.ಐ.ಡಿ. ಬಗ್ಗೆ ಒಂದು ಸಮಗ್ರವಾದ ತನಿಖೆಯನ್ನು ಮಾಡಿ ಯಾರು 81 ರಿಂದ 87ರಲ್ಲಿ ಮುಖ್ಯಸ್ಥರು ಇದ್ದರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈ ಇಲಾಖೆಯ ಮುಖ್ಯಸ್ಥರು ನಾವು ಏನು ಬೇಕಾದರೂ ಮಾಡಬಹುದು ಎಂದು ನುಸುಳಿಕೊಳ್ಳುತ್ತಾರೆ. ಅವರ ಗಮನಕ್ಕೆ ಬಂದಾಗ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್‌ಗಳನ್ನು ಹಾಗೆಯೇ ಇಡುತ್ತಾರೆ. ಇದರ ಬಗ್ಗೆ ನಾನು ಈಗಾಗಲೇ ಉದಾಹರಣೆಯನ್ನು ಕೊಟ್ಟಿದ್ದೇನೆ. ತಾವು ಬೇಕಾದರೆ ತರಿಸಿ ನೋಡಿ. 85–86–87ರಲ್ಲಿ ಏನಾಗಿದೆ ಎಂಬುದನ್ನು ತರಿಸಿ ನೋಡಿ. ಈ ಅಧಿಕಾರಿಗಳ ಮೇಲೆ ವೈಯಕ್ತಿಕವಾಗಿ ನನಗೆ ವಿರೋಧ. ಇಲ್ಲದೇ ಇರಬಹುದು. ಆದರೆ ಅವರು ಮಾಡಿರತಕ್ಕ ಅಕ್ರಮಗಳನ್ನು ರಾಜ್ಯದ ಹಿತದೃಷ್ಟಿಯಿಂದ ಜನಗಳ ಹಿತದೃಷ್ಟಿಯಿಂದ ನಾವು ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಮೇಲಟ್ಟದ ಅಧಿಕಾರಿಗಳಿಗೆ ರಕ್ಷಣೆ ಇರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಆಗಲಿಲ್ಲ. ಇದರ ಬಗ್ಗೆ ಸಮಗ್ರ ತನಿಖೆ ಮಾಡಬೇಕು. ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಆರು ತಿಂಗಳಲ್ಲೋ ಅಥವಾ ಒಂದು ವರ್ಷದಲ್ಲಿ ಕ್ರಮ ತೆಗೆದುಕೊಂಡು ಏನಾದರೊಂದು ಮಾಡಬೇಕು. ಕೆ.ಎ.ಎಸ್. ಅಧಿಕಾರಿಗಳನ್ನು ನೀವೇ ಸಸ್ಪೆಂಡ್ ಮಾಡಬಹುದು. ಆದರೆ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ಮಾಡಲು ಆಗುವುದಿಲ್ಲ ಎಂದು ನೀವು ಹೇಳುತ್ತೀರಿ. ದೃಢವಾಗಿ ನಾನು ಹೇಳುತ್ತೇನೆ. ಅನೇಕ ಜನ ಮೇಲಟ್ಟದ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ. ಇಲ್ಲದಿದ್ದರೆ ಇದನ್ನು ಮಾಡಲು ಆಗುವುದಿಲ್ಲ. ಆದರೆ ಅವರು ಬಹಳ ಸುಲಭವಾಗಿ ತಪ್ಪಿಸಿಕೊಳ್ಳುತ್ತಾರೆ. ತಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

† ಶ್ರೀ ವಾಟಾಳ್ ನಾಗರಾಜ್:– ರಾಜ್ಯದ ಸರ್ಕಾರಿ ಜೀವವಿಮಾ ಇಲಾಖೆ ಏನು ಇದೆ ಇದು ಬಹಳ ಒಳ್ಳೆಯ ಉದ್ದೇಶದಿಂದ ಪ್ರಾರಂಭವಾದ ಇಲಾಖೆ. ಈ ಒಂದು ಇಲಾಖೆಗೆ ಒಂದು ಕಾಲದಲ್ಲಿ ಬಹಳ ಒಳ್ಳೆಯ ಹೆಸರು ಇತ್ತು. ಈಗ ಈ ಇಲಾಖೆಯಲ್ಲಿ ಹೆಸರಿಗಿಂತ ಹೆಚ್ಚಾಗಿ, ಕಡತಗಳು ಸಂಪೂರ್ಣವಾಗಿ ನಾಶವಾಗಿದೆ. ಎಷ್ಟು ಕೋಟಿ ರೂಪಾಯಿಗಳು ನಷ್ಟವಾಗಿದೆ ಎಂಬುದು ಸುಮ್ಮನೆ ಮೇಲು ನೋಟಕ್ಕೆ ಬೆಳಕಿಗೆ ಬಂದಿದೆ.

ತಾವು ಇದನ್ನು ಸಮಗ್ರವಾಗಿ ಒಂದು ತನಿಖೆಯನ್ನು ಉನ್ನತ ಮಟ್ಟದಲ್ಲಿ ತಾವು ನಡೆಸುವುದಕ್ಕೆ ಇವತ್ತು ಒಂದು ಆದೇಶ ನೀಡುವುದಾದರೆ ಇದರೊಳಗೆ ಎಷ್ಟೆಷ್ಟು ಅನ್ಯಾಯಗಳು ನಡೆದಿದೆ ಎನ್ನತಕ್ಕಂಥದ್ದು ಹೊರಗಡೆ ಬರುತ್ತದೆ. ಇದರಲ್ಲಿ ಅನೇಕ ಜನ ಅಧಿಕಾರಿಗಳು ಸಿಕ್ಕಿಬೀಳುತ್ತಾರೆ. ಮತ್ತು ಸರ್ಕಾರಿ ನೌಕರರು ಪಾಪ, ಕೊಟ್ಟಂಥ ಹಣ ಜೀವವಿಮೆಗೆ ಕೊಟ್ಟಂಥ ಹಣ ಎಲ್ಲಿಗೆ ತಲುಪಬೇಕು ? ಯಾವ ಹಣವೂ ಲೆಕ್ಕಕ್ಕೆ ತಲುಪಿಲ್ಲ. ಈ ರೀತಿಯಾದಂಥ ಅನೇಕ ದುರುಪಯೋಗಗಳು ನಡೆದುಹೋಗಿದೆ. ಈ ದುರುಪಯೋಗ ಬಹುಶಃ ಇವತ್ತು ಪತ್ರಿಕೆಯ ಮೂಲಕ ಬೆಳಕಿಗೆ ಬಂದಿದೆ. ಇದು ಎರಡು ಮೂರು ವರ್ಷದಿಂದ ಇದೇ ರೀತಿ ನಡೆಯುತ್ತಿದೆ. ಇದರ ಬಗ್ಗೆ ಅನೇಕ ಸಾರಿ ನಾವು ಎಚ್ಚರಿಕೆಯನ್ನು ಅಧಿಕಾರಿಗಳಿಗೆ ಸಂಬಂಧಪಟ್ಟವರಿಗೆ ಹೇಳಿದ್ದೇವೆ. ಇಷ್ಟಾದರೂ ಸಹ ಯಾವ ಜವಾಬ್ದಾರಿಯನ್ನು ತೆಗೆದುಕೊಳ್ಳದೆ ಬೇಜವಾಬ್ದಾರಿಯಿಂದ ನಡೆಯುತ್ತಿದೆ. ನನಗೆ ಅನಿಸುತ್ತಿದೆ, ಇದು ಎಷ್ಟು ಬೆಳೆಯಬೇಕಾಗಿತ್ತು, ಆ ಪ್ರಮಾಣದಲ್ಲಿ ಇಲಾಖೆ ಬೆಳೆದಿಲ್ಲ. ಬಹಳ ಉನ್ನತವಾಗಿ ಬೆಳೆಯಬೇಕಾಗಿತ್ತು. ಇದಕ್ಕೆ ಒಂದು ವಿಶಿಷ್ಟವಾದಂಥ ನೀತಿ ಇದೆ. ಎಲ್ಲವನ್ನು ಗಾಳಿಗೆ ತೂರಿ ಅದೊಂದು

ಭ್ರಷ್ಟಾಚಾರದ ಆಗರವಾಗಿದೆ. ಈ ಬಗ್ಗೆ ಸರ್ಕಾರ ಸಮಗ್ರವಾದಂಥ ತನಿಖೆಯನ್ನು ನಡೆಸಬೇಕೆಂದು ಹೇಳಿ ಅಧ್ಯಕ್ಷರ ಮೂಲಕ ನಾವು ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಉಪನಾಯಕರಾದಂಥ ವಿರೋಧಪಕ್ಷದ ಸಿಂಧ್ಯರವರು ಮತ್ತು ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂಥ ವಿಚಾರ ಬಹಳ ಗಂಭೀರವಾಗಿದೆ. ಇದಕ್ಕೆ ನಾವು ಸೂಕ್ತ ತನಿಖೆಯನ್ನು ನಡೆಸಿ ಯಾರು ತಪ್ಪಿತಸ್ಥರು ಇದ್ದಾರೆ, ಅವರನ್ನು ಶಿಕ್ಷೆ ಮಾಡುವುದಕ್ಕೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಅಕೌಂಟಿಬಿಲಿಟಿ ಬಗ್ಗೆ ಹೇಳಿದೆ. ನಾನು ಸ್ಪೆಸಿಫಿಕ್ ಛಾರ್ಜ್ ಮಾಡಿದ್ದೇನೆ. ನಾನು ನಿಮಗೆ ಹೇಳಿದೆ. 33 ಕೋಟಿ ರೂಪಾಯಿ ಭಾಸಿಯನ್ನು ತೆಗೆದುಕೊಂಡಿರತಕ್ಕಂಥ ಒಬ್ಬ ಐ.ಎ.ಎಸ್. ಆಫೀಸರ್ ಬೋರ್ಡ್ ಗಮನಕ್ಕೆ ಛೇರ್ಮೇನ್ ಗಮನಕ್ಕೆ ತರದೆ, ಮಿನಿಸ್ಟರ್ ಗಮನಕ್ಕೆ ತರದೆ ಮಾಡಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿ ಒಬ್ಬ ಮಿನಿಸ್ಟರ್ ಆಗಿರತಕ್ಕಂಥವನು ಚೀಫ್ ಸೆಕ್ರೆಟರಿಯವರಿಗೆ ಬರೆದರೆ ಎರಡು ವರ್ಷ ಆ ಫೈಲನ್ನ ಹಾಗೆಯೇ ಇಡುತ್ತಾರೆ. ಗೌರ್ನರ್ಸ್ ಆಡಳಿತ ಬರುತ್ತದೆ, ಬೇರೆ ಪಕ್ಷದ ಸರ್ಕಾರ ಬರುತ್ತದೆ ಎಂದು ಹೇಳಿ ಅವರು ನಿಭಾಯಿಸಿಕೊಂಡು ಮುಖ್ಯವಾದ ಸ್ಥಾನದಲ್ಲಿ ಅವರು ವಿಧಾನಸೌಧದಲ್ಲಿ ಇರುವುದಾದಲ್ಲಿ ಇನ್ನು ನಮ್ಮ ಮಾತಿಗೆ ಏನು ಬೆಲೆ ಬಂತು ? ತಾವು ದಯವಿಟ್ಟು ಹೇಳಿ. ಇಂಥ ನಾಲ್ಕೈದು ಸ್ಪೆಸಿಫಿಕ್ ಇನ್ಸ್‌ಟೆನ್ಸ್ ನಾನು ಹೇಳುತ್ತಿದ್ದೇನೆ. ನೀವು ಬೇಕಾದರೆ ಆ ಫೈಲುಗಳನ್ನು ತರಿಸಿ ನೋಡಿ. ನಾನು ಯಾರದ್ದೇ ಒಬ್ಬರ ವಿರುದ್ಧವಾಗಿ ಮಾತನಾಡಬೇಕು ಎಂದಲ್ಲ; ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ ಈ ಸ್ಥಿತಿಗೆ ಬರಬೇಕಾದರೆ ಇವರೇ ಕಾರಣ ಎಂದು ನಾನು ಹೇಳುತ್ತೇನೆ. ಒಂದು ಆರ್.ಅಂಡ್ ಡಿ. ಯೂನಿಟ್‌ಗಳು ಕೆಲಸ ಮಾಡುವುದಿಲ್ಲ. ಇವರ ಮೇಲೆ ಏನು ಕ್ರಮ ತೆಗೆದುಕೊಳ್ಳವುದಿಲ್ಲ ಎಂದು ಇವರಿಗೆಲ್ಲಾ ಗೊತ್ತಿದೆ. ಇನ್ನೊಂದು ಕಡೆ ನಿಭಾಯಿಸಿಕೊಳ್ಳುತ್ತಾರೆ. ಚೆನ್ನಾಗಿ ಒಳ್ಳೆಯ ಇಂಗ್ಲೀಷ್‌ನಲ್ಲಿ ಮಾತನಾಡಿಬಿಡುತ್ತಾರೆ. ಅವರಿವರ ಕಡೆಯಿಂದ ಹೇಳಿಸಿಬಿಡುತ್ತಾರೆ. ಒಳ್ಳೆಯ ಪೋಸ್ಟ್‌ನಲ್ಲಿ ಇವರು ಬೆಣ್ಣೆ ಹೊಡೆಯುವ ಜಾಗದಲ್ಲಿ ಇದ್ದು ಬಿಡುತ್ತಾರೆ. ಇವರ ಮೇಲೆ ನಾವು ಏನು ಕ್ರಮ ತೆಗೆದುಕೊಳ್ಳತಕ್ಕಂಥದ್ದು ? ತಾವೇನು ಕಳೆದ ಎರಡು ಮೂರು ತಿಂಗಳಲ್ಲಿ ಕೆಲವು ಕ್ರಮ ತೆಗೆದುಕೊಂಡು ಸರ್ಕಾರದ ಒಂದು ಯಂತ್ರವನ್ನು ಚುರುಕುಗೊಳಿಸುವುದಕ್ಕೆ ಪ್ರಯತ್ನಮಾಡುತ್ತಿದ್ದೀರಿ, ಇಲ್ಲಿ ನೋಡಿ ಚುರುಕು ಮುಟ್ಟಿಸಬೇಕು. ಇಲ್ಲಿ ನೀವು ಚುರುಕು ಮುಟ್ಟಿಸಿದರೆ ಅದರ ಫಲ ಕೆಳಗಡೆಯವರಿಗೆ ಸಿಕ್ಕುತ್ತದೆ. ಇಲ್ಲದಿದ್ದರೆ ಖಂಡಿತವಾಗಿಯೂ ಸಿಗುವುದಿಲ್ಲ. ಈಗ ನಾನು ಧೈರ್ಯವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಕಳೆದ 45 ದಿನಗಳಲ್ಲಿ ಇಲ್ಲಿ ಅಸೆಂಬ್ಲಿಯಲ್ಲಿ ಬಂದು ನಾವು ಗಂಟಲು ಕಿರುಚಿಕೊಂಡಿದ್ದೇವೆ. ಮತ್ತು ಅದರ ಪರಿಣಾಮ ಕೆಳಮಟ್ಟದಲ್ಲಿ ಏನಾಗಿದೆ ? ಏನೂ ಆಗಿಲ್ಲ ಸ್ವಾಮಿ. ನೀವು ಚುರುಕು ತೆಗೆದುಕೊಂಡುನೋಡಿ. ನೀವು ನಿನ್ನೆ ಮೈಸೂರಿಗೆ ಕಾಲರಾ ವಿಚಾರದಲ್ಲಿ ಹೋಗಿದ್ದಿರಿ. ಪಿಡಬ್ಲ್ಯೂಡಿ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರನ್ನು ಸಸ್ಪೆಂಡ್ ಮಾಡಿದ್ದೀರಿ. ಡಿ.ಹೆಚ್.ಓ. ಸಸ್ಪೆಂಡ್ ಮಾಡಿದ್ದೀರಿ. ತಕ್ಷಣ ಅದರ ಪರಿಣಾಮವಾಗಿದೆ. ಆ ರೀತಿ ನೀವು ದಿಟ್ಟವಾದ ಕ್ರಮ ತೆಗೆದುಕೊಳ್ಳಬೇಕು. ಇವತ್ತು ನಾವು ವಿರೋಧಪಕ್ಷದಲ್ಲಿರಬಹುದು. ನಿಮಗೆ ಈ ವಿಚಾರದಲ್ಲಿ ಸಹಾಯ ಮಾಡುತ್ತೇವೆ. ಆದರೆ ತಾವು ಇವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಮಾತ್ರ ಹಿಂಜರಿಯಬಾರದು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೇ, ಯಾರನ್ನೂ ಕೂಡ ಯಾವ ಅಧಿಕಾರಿಗಳನ್ನಾಗಲಿ ರಕ್ಷಣೆ ಮಾಡತಕ್ಕಂಥ ಪ್ರಶ್ನೆ ಅಲ್ಲ. ತಾವು ಏನೊಂದು ಘಟನೆಯನ್ನು ಕೆ.ಎಸ್.ಆರ್.ಟಿ.ಸಿ. ಬಗ್ಗೆ ಕೊಟ್ಟದ್ದೀರಿ, ಅದರ ವರದಿಯನ್ನು ತರಿಸಿ ಯಾರು ತಪ್ಪಿತಸ್ಥರು ಇದ್ದಾರೆ,

ಅದಕ್ಕೆ ಶೀಘ್ರ ತುರ್ತಾಗಿ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಅದರಿಂದ ಯಾರೇ ಅಧಿಕಾರಿಗಳಾಗಲಿ, ಯಾವುದೇ ಸಂದರ್ಭದಲ್ಲಾಗಲೀ ಏನಾದರೂ ಈ ರೀತಿಯ ಅಪಾದನೆಗಳು ಬಂದದ್ದು ಇದ್ದರೆ ಅವರನ್ನು ರಕ್ಷಣೆ ಮಾಡತಕ್ಕಂಥ ಪ್ರಶ್ನೆ ಇಲ್ಲ. ನಾವು ತಕ್ಷಣ ಅದನ್ನು ತರಿಸಿ ಆಡಳಿತದ ಎಲ್ಲಾ ರಂಗವನ್ನೂ ಕೂಡ ಚುರುಕುಗೊಳಿಸುತ್ತೇವೆ. ಎಲ್ಲಿ ಭ್ರಷಾಚಾರದ ಪ್ರಕರಣಗಳು ಇವೆ, ಅದನ್ನೆಲ್ಲಾ ಗುರುತಿಸಿ ಎತ್ತಿ ತೆಗೆದು ಆ ಕಡತ ಎಲ್ಲಿ ಮೂಲೆಯಲ್ಲಿ ಇದ್ದರೂ ಕೂಡ ಅದನ್ನು ನಾವು ಎತ್ತಿ ತೆಗೆದು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

2) ದೂರದರ್ಶನದಲ್ಲಿ ವಿಧಾನ ಮಂಡಲದ ಕಾರ್ಯಕಲಾಪಗಳ ಸುದ್ದಿಯ ವೇಳೆಯಲ್ಲಿ ಕಡಿತ

† ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಚಾರ ತಮ್ಮ ಗಮನಕ್ಕೆ ತಂದಿದ್ದೆ. ಈ ದೂರದರ್ಶನದಲ್ಲಿ ನಮ್ಮ 'ವಿಧಾನಮಂಡಲದಲ್ಲಿ ಇಂದು' ಒಂದು ಹತ್ತು ನಿಮಿಷ ಅವಕಾಶ ಕೊಡುತ್ತಿದ್ದರು. ಸುದ್ದಿಯನ್ನು ಪ್ರಚಾರ ಮಾಡುತ್ತಿದ್ದರು. ಇವತ್ತು ಅದು ಎರಡೂವರೆ ನಿಮಿಷಕ್ಕೆ ಇಳಿದಿದೆ. ಬೇರೆ ರಾಜ್ಯಗಳಲ್ಲಿ ಹತ್ತು ನಿಮಿಷ ಇದೆ. ಅದೇನು ಕರ್ನಾಟಕ ರಾಜ್ಯಕ್ಕೆ ಈ ಅನ್ಯಾಯವಾಗಿರುವುದು ಸರಿಯಲ್ಲ. ಒಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತೇನೆ. ಸರ್ಕಾರ ಕೇಂದ್ರದ ಜೊತೆಯಲ್ಲಿ ಮಾತನಾಡಬೇಕು. ಆ ಪ್ರಸಾರ ಮಂತ್ರಿಗಳ ಜೊತೆಯಲ್ಲಿ ತಾವು ಇದನ್ನು ಬಹಳ ಪರಿಣಾಮಕಾರಿಯಾಗಿ ಮಾತನಾಡಬೇಕು. ಇದರ ಜೊತೆಗೆ ನಮ್ಮಲ್ಲಿ ಈಗ ತಮಿಳುನಾಡಿನಲ್ಲಿ ಹಿಂದಿ ಸುದ್ದಿ, ಅದನ್ನು ಸಂಪೂರ್ಣ ರದ್ದುಮಾಡಿದ್ದಾರೆ, ಅದರ ಬದಲು ತಮಿಳುಸುದ್ದಿಯನ್ನು ಪ್ರಸಾರ ಮಾಡುತ್ತಿದ್ದಾರೆ. ನಮ್ಮಲ್ಲಿ ಕೊಡತಕ್ಕಂಥ ಕನ್ನಡ ಪ್ರಾದೇಶಿಕ ಸುದ್ದಿಯಲ್ಲಿ 80 ಭಾಗ ಬೇರೆ ರಾಜ್ಯದ್ದು ಬೇರೆ ಭಾಷೆಗಳ ಸುದ್ದಿಗಳೇ ಬರುತ್ತವೆ. ಕೇಂದ್ರದ್ದು, ಅದು ಇದು ನಮ್ಮಲ್ಲಿ ಎರಡು ನಿಮಿಷ ಅಥವಾ ಒಂದು ನಿಮಿಷ ನಮಗೆ ಸಿಗತಕ್ಕಂಥದ್ದು. ನಾವೂ ಸಹಾ ಆ ಹಿಂದಿಯನ್ನು ವಿರೋಧ ಮಾಡುತ್ತಿಲ್ಲ. ನಮಗೆ ಸುದ್ದಿ ಪ್ರಚಾರ ಜಾಸ್ತಿ ಇರುವುದರಿಂದ ಈ ಪ್ರಾದೇಶಿಕ ಸುದ್ದಿ ಏನು ಒಂದು ಸಾರಿ ನಮಗೆ ಕೊಡುತ್ತಿದ್ದೀರಿ, 7–30 ಗಂಟೆಗೆ ಮತ್ತೊಂದು ಸಾರಿ ಇನ್ನೊಂದು 20 ನಿಮಿಷ ನಮಗೆ ಜಾಸ್ತಿ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕಾದದ್ದು; ಅದನ್ನು ತಾವು ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡಬೇಕು. ಮೂರನೆಯ ವಿಚಾರ ತಮ್ಮ ಮೂಲಕ ತರುವುದು ಎಂದರೆ ಲೋಕಸಭೆಯಲ್ಲಿ ನೇರ ಪ್ರಸಾರದಲ್ಲಿ ತಮ್ಮ ಕಾರ್ಯಕಲಾಪಗಳನ್ನು ಪ್ರಚಾರ ಮಾಡುತ್ತಾರೆ. ಒಂದು ಸುದ್ದಿ ಅವರ ದೂರದರ್ಶನ ಮೂಲಕ ಪ್ರಚಾರ ಮಾಡುತ್ತಾರೆ. ನಮ್ಮ ಹಿಂದಿನ ಅಧ್ಯಕ್ಷರಾಗಿದ್ದಂತಹ ಮಾನ್ಯ ಎಸ್.ಎಂ. ಕೃಷ್ಣರವರು ಸಹ ಇದರ ಬಗ್ಗೆ ಒಂದು ಚಿಂತನೆಯನ್ನು ಮಾಡಿದ್ದರು. ಈ ಸಭೆಯನ್ನು ಸಹಿತ ನಾವು ದೂರದರ್ಶನದ ಮೂಲಕ ಪ್ರಚಾರ ಕೊಡತಕ್ಕಂಥ, ಮತ್ತು ದೂರದರ್ಶನದಲ್ಲಿ ತೋರಿಸತಕ್ಕಂಥ ವ್ಯವಸ್ಥೆಯಾಗಬೇಕೆಂದು ಹೇಳಿ ಒಂದು ಚಿಂತನೆ ನಡೆದಿತ್ತು. ಈ ಬಗ್ಗೆ ಅವರು ಕೇಂದ್ರ ಸರ್ಕಾರದ ಜೊತೆಯಲ್ಲಿ ಏನು ಮಾತನಾಡಿದ್ದರೋ ಗೊತ್ತಿಲ್ಲ. ತಮ್ಮನ್ನು ನಾವು ಕಳಕಳಿಯಿಂದ ಮನವಿ ಮಾಡತ್ತೇವೆ. ಲೋಕಸಭೆಯಂತೆ ಈ ಸದನದ ಕಾರ್ಯಕಲಾಪವನ್ನು ಆ ಮಾಧ್ಯಮದ ಮೂಲಕ ಜನರಿಗೆ ತೋರಿಸತಕ್ಕಂಥ ವ್ಯವಸ್ಥೆಯಾಗತಕ್ಕ ಪರಿಸ್ಥಿತಿ ಆದರೆ ಉತ್ತಮ ಮತ್ತು ಜವಾಬ್ದಾರಿಯುತವಾಗುತ್ತದೆ. ಬಹಳ ಸಂತೋಷವಾಗುತ್ತದೆ. ಈ ದೃಷ್ಟಿಯಿಂದ ತಮಗೆ ನಾನು ಏನು ಹೇಳುತ್ತಿದ್ದೇನೆ ಅಂದರೆ ತಾವು ನೇರವಾಗಿ ಕೇಂದ್ರ ಸಚಿವರ ಜೊತೆಯಲ್ಲಿ ಪ್ರಧಾನ ಮಂತ್ರಿಗಳ ಜೊತೆಯಲ್ಲಿ ತಾವು ಮತ್ತು ನಮ್ಮ ಮುಖ್ಯಮಂತ್ರಿಗಳು ಮಾತನಾಡಿ ಪ್ರಚಾರಮಾಡುವಂತೆ ಮಾಡಿ. ಇದರಲ್ಲಿ ಎರಡು ಅನುಕೂಲಗಳು ಆಗುತ್ತವೆ. ಒಂದು ಅನುಕೂಲ ನಮ್ಮ ರಾಜ್ಯದ ಜನತೆಗೆ ಈ ಮಾಧ್ಯಮದ ಮೂಲಕ ನಮ್ಮ ಸದನದಲ್ಲಿ ನಡೆಯತಕ್ಕಂಥ ವಿಚಾರಗಳು ಗೊತ್ತಾಗುತ್ತದೆ. ಮತ್ತೊಂದು ಅತಿ ಮುಖ್ಯವಾಗಿ ತಮಗೆ ಅನುಕೂಲವಾಗುತ್ತದೆ. ಏನೆಂದರೆ, ಈ ಸದನದಲ್ಲಿ ಎಲ್ಲಾ ಸದಸ್ಯರು ಕುಳಿತಿರುತ್ತಾರೆ. ಅತ್ತ ಇತ್ತ ಅಳ್ಳಾಡುವುದಕ್ಕೆ ಆಗುವುದಿಲ್ಲ. ಅದೊಂದು ಬಹಳ ಅತಿ ಮುಖ್ಯವಾದುದು.